Saturday 29th July 2023, Page No.12

# VTU: Sri. A.V.S. Murthy and three others including Doctor of Science

ಆ.1ರಂದು ವಿಟಿಯು ಘಟಿಕೋತ್ಸವ । 42,545 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

## ಚುಂಚಶ್ರೀ ಸೇರಿ ಮೂವರಿಗೆ ಗೌರವ ಡಾಕ್ಟರೇಟ್

■ ವಿಕ ಸುದ್ದಿಲೋಕ ಬೆಳಗಾವಿ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) 23ನೇ ಘಟಿಕೋತ್ಸವ ಆ.1ರಂದು ನಡೆಯಲಿದೆ. ಘಟಿಕೋತ್ಸವದಲ್ಲಿ 42,545 ವಿದ್ಯಾರ್ಥಿಗಳಿಗೆ ಪದವಿ ಪ್ರದಾನದ ಜತೆಗೆ ಆದಿಚುಂಚನಗಿರಿ ಸ್ವಾಮೀಜಿ ಸೇರಿ ಮೂವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಗುತ್ತದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ವಿಟಿಯು ಕುಲಪತಿ ಪ್ರೊ. ಎಸ್. ವಿದ್ಯಾಶಂಕರ, "ಬಿಇ ಮತ್ತು ಬಿಟೆಕ್ ಪದವಿ ಪೂರ್ಣಗೊಳಿಸಿದ 42,545 ವಿದ್ಯಾರ್ಥಿಗಳು ಹಾಗೂ 550 ಪಿಎಚ್‌ಡಿ, ನಾಲ್ವರು ಎಂಎಸ್ಸಿ, ಇಬ್ಬರು ವಿದ್ಯಾರ್ಥಿಗಳಿಗೆ ಸಂಯೋಜಿತ ಪದವಿ (ಇಂಟಿಗ್ರೇಟೆಡ್ ಡಿಗ್ರಿ) ಸೇರಿದಂತೆ 556 ಸಂಶೋಧನಾ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು," ಎಂದು ಅವರು ಹೇಳಿದರು.

"ವಿಟಿಯು ಅಡಿ ಕೋರ್ಸ್‌ಗಳ ಸಂಖ್ಯೆ ಹೆಚ್ಚಾಗಿದ್ದು, ಪದವೀಧರರ ಸಂಖ್ಯೆ ದ್ವಿಗುಣಗೊಳ್ಳುತ್ತಿದೆ. ಜತೆಗೆ ಪದವಿ ಮತ್ತು ಸ್ನಾತಕೋತ್ತರ ಪದವಿ ಇವೆಂಟ್ ಕ್ಯಾಲೆಂಡರ್ ಹಾಗೂ ಫಲಿತಾಂಶಗಳ ನಡುವಿನ ಅಂತರ ಹೆಚ್ಚಿರುವುದರಿಂದ ಮುಂದಿನ ಶೈಕ್ಷಣಿಕ ಚಟುವಟಿಕೆ, ಉದ್ಯೋಗಾವಕಾಶಗಳಿಗೆ ತೊಂದರೆಯಾಗದಂತೆ ಈ ವರ್ಷ 2 ಘಟಿಕೋತ್ಸವ ನಡೆಸಲು ನಿರ್ಧರಿಸಲಾಗಿದೆ. ಆ.1ರಂದು ಪದವಿ ವಿದ್ಯಾರ್ಥಿಗಳಿಗೆ ನಂತರ ಜನವರಿ ಅಥವಾ ಫೆಬ್ರವರಿಯಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಮಿನಿ ಘಟಿಕೋತ್ಸವ ನಡೆಸಲಾಗುವುದು," ಎಂದು ಕುಲಪತಿ ತಿಳಿಸಿದರು.


ನಿರ್ಮಲಾನಂದನಾಥ ಸ್ವಾಮೀಜಿ


ಎ.ವಿ.ಎಸ್ ಮೂರ್ತಿ


ಎಚ್.ಎನ್ ಶೆಟ್ಟಿ

"ಪದವಿ ಫಲಿತಾಂಶ ವಿಳಂಬದಿಂದ ಉನ್ನತ ಶಿಕ್ಷಣ ಬಯಸಿ ವಿದೇಶಕ್ಕೆ ತೆರಳುವ ಪದವೀಧರರಿಗೆ ಸಮಸ್ಯೆಯಾಗುತ್ತಿರುವ ಕಾರಣ ಈ ವರ್ಷ ಮೇ ತಿಂಗಳಾಂತ್ಯಕ್ಕೆ ಫಲಿತಾಂಶ ಪ್ರಕಟಗೊಳ್ಳುವಂತೆ ನೋಡಿಕೊಳ್ಳಲಾಗಿದೆ. ಪದವಿ ಮತ್ತು ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳ ನಡುವಿನ ವ್ಯತ್ಯಾಸ ಸರಿದೂಗಿಸುವ ಪ್ರಯತ್ನಕ್ಕೆ ಈಗಾಗಲೇ ಚಾಲನೆ ನೀಡಲಾಗಿದೆ," ಎಂದು ಪ್ರೊ.ವಿದ್ಯಾಶಂಕರ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕುಲಸಚಿವರಾದ ಬಿ.ಇ. ರಂಗಸ್ವಾಮಿ, ಟಿ.ಎನ್. ಶ್ರೀನಿವಾಸ್ ಇದ್ದರು.

### ಗೌರವ ಡಾಕ್ಟರೇಟ್

ಘಟಿಕೋತ್ಸವದಲ್ಲಿ ಆದಿ ಚುಂಚನಗಿರಿ ಮಹಾಸಂಸ್ಥಾನ ಮಠದ ಜಗದ್ಗುರು ಡಾ.ನಿರ್ಮಲಾನಂದನಾಥ ಸ್ವಾಮೀಜಿ, ರಾಷ್ಟ್ರೀಯ ಶಿಕ್ಷಣ ಸಮಿತಿಯ ಗೌರವ ಕಾರ್ಯದರ್ಶಿ ಡಾ.ಎ.ವಿ.ಎಸ್. ಮೂರ್ತಿ ಹಾಗೂ ಮೈಸೂರು ಮೆಕ್ಯಾನ್ ಟೈಲ್ ಕಂಪನಿ ಅಧ್ಯಕ್ಷ ಎಚ್.ಎನ್. ಶೆಟ್ಟಿ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಲಾಗುತ್ತಿದೆ," ಎಂದರು.

### ಚಿನ್ಮಯ ವಿಕಾಸ್‌ಗೆ 13 ಚಿನ್ನ

ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಿವಿಲ್ ವಿದ್ಯಾರ್ಥಿ ಮದಕಶಿರಾ ಚಿನ್ಮಯ ವಿಕಾಸ್ ಅತಿಹೆಚ್ಚು ಅಂದರೆ 13 ಚಿನ್ನದ ಪದಕ ಪಡೆದಿದ್ದಾರೆ. ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮೆಕ್ಯಾನಿಕಲ್ ಎಂಜಿನಿಯರಿಂಗ್ (ಬಿಐಟಿ) ವಿದ್ಯಾರ್ಥಿ ಅಭಿಷೇಕ್ ಜಿ., ಬೆಂಗಳೂರಿನ ಸರ್ ಎಂ.ವಿ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಎಂಜಿನಿಯರಿಂಗ್ ವಿದ್ಯಾರ್ಥಿ ಗುಡಿಕಲ್ ಸಾಯಿ ವಂಶಿ ಮತ್ತು ಬಳ್ಳಾರಿಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಎಂಜಿನಿಯರಿಂಗ್ ವಿದ್ಯಾರ್ಥಿ ಕೆ.ಆರ್. ಸಂಪತ್‌ಕುಮಾರ್ ತಲಾ 7 ಚಿನ್ನದ ಪದಕ ಪಡೆದಿದ್ದಾರೆ. ಶಿವಮೊಗ್ಗದ ಜೆಎನ್‌ಎನ್‌ಸಿಇ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿನಿ ಪಾರ್ವತಿ ಸೆಲೆರಾ 6, ಬೆಳಗಾವಿಯ ಕೆಎಲ್‌ಇ ಎಂ.ಎಸ್. ಶೇಷಗಿರಿ ಎಂಜಿನಿಯರಿಂಗ್ ಕಾಲೇಜಿನ ಕೆಮಿಕಲ್ ಎಂಜಿನಿಯರಿಂಗ್ ವಿದ್ಯಾರ್ಥಿನಿ ಆವಂತಿಕಾ ಸಾವಕಾರ್ 5, ಬೆಂಗಳೂರಿನ ಆರ್‌ಎನ್‌ಎಸ್‌ಐಟಿ ಎಲೆಕ್ಟ್ರಾನಿಕ್ಸ್ ಆ್ಯಂಡ್ ಇನ್‌ಸ್ಟ್ರುಮೆಂಟೇಷನ್ ವಿದ್ಯಾರ್ಥಿನಿ ಹರ್ಷಿತಾ ಆರ್. ಮತ್ತು ಬೆಂಗಳೂರಿನ ಸಾಯಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಇನ್‌ಫಾರ್ಮೇಷನ್ ಸೈನ್ಸ್ ವಿದ್ಯಾರ್ಥಿನಿ ಎಂ.ನವೀನ್ ತಲಾ 4, ಬೆಂಗಳೂರಿನ ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಏರೋನಾಟಿಕಲ್ ಎಂಜಿನಿಯರಿಂಗ್ ವಿದ್ಯಾರ್ಥಿ ಎಸ್. ಸುಹಾಸ್ ಮತ್ತು ಮೈನಿಂಗ್ ಎಂಜಿನಿಯರಿಂಗ್ ವಿದ್ಯಾರ್ಥಿ ಕೆಂಚೊಗ್ಯೆಲ್‌ತ್ಸೇನ್ ತಲಾ ಎರಡು ಚಿನ್ನದ ಪದಕ ಪಡೆದಿದ್ದಾರೆ.


PUBLIC NOTICE

It is hereby informed to the public that my client intend to purchase the property more fully described in the schedule hereunder from its lawful owner D.G.Krishnappa S/o Late Gange Gowda Dandenahally Village, Sankigatta Post, Thippasandra Hobali Magadi Taluk Ramanagara district and if any person(s) having any objections or claims, may send their objections with all supportive documents to the undersigned **within 7 days** from the date of this publication failing which my clients would proceed to purchase the Schedule Property as if there is no claim or objections.

SCHEDULE

All that piece and parcel of the residential converted (vide Official Memorandum bearing No.ALN S.R. 678/2011-12 dated 15-01-2013 issued by the Deputy Commissioner, Chickaballapur) land measuring an extent of 2 acre in Sy.No.127/1 situated at Angatta Village, Nandhi Hobli, Chickballapura Taluk, Chickballapura District and bounded by:

**East** : Road, **West** : Sy. No.109,